**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

***SC.No.146/2022***

PW.2
CW.2

ದಿನಾಂಕಃ 11-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಹೆಸರುಃ ಕಮಲಾನಾಯ್ಕು
ತಂದೆಯ ಹೆಸರುಃ ಸಕ್ರಾನಾಯ್ಕು
ವಯಸ್ಸುಃ 65 ವರ್ಷ
ವೃತ್ತಿಃ ವ್ಯವಸಾಯ
ವಾಸಸ್ಥಳಃ ಕಮಲಾನಾಯ್ಕುನ ತಾಂಡ್ಯ

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಕಮಲಾನಾಯ್ಕುನ ತಾಂಡ್ಯಾದಲ್ಲಿ 150 ರಿಂದ 180 ಮನೆಗಳು ಇರುತ್ತವೆ. 1 ನೇ ಅರೋಪಿ ತಂದೆಯ ಹೆಸರು ರಾಗ್ಯಾನಾಯ್ಕು. 1 ನೇ ಅರೋಪಿ ತಂದೆಗೆ ನಾಲ್ವರು ಮಕ್ಕಳು. ಅವರಿಗೆ ಒಟ್ಟು 25 ಎಕರೆ ಜಮೀನು ಇರುತ್ತದೆ. ರಾಜಾನಾಯ್ಕುನಿಗೆ ಒಬ್ಬ ತಮ್ಮ ಮತ್ತು ಒಂದು ತಂಗಿ. ತಮ್ಮನ ಹೆಸರು ರವಿಚಂದ್ರ. 1 ನೇ ಅರೋಪಿಗೆ ವಿವಾಹವಾಗಿರುತ್ತದೆ. 1 ನೇ ಅರೋಪಿಗೆ ಇಬ್ಬರು ಹೆಣ್ಣು ಮಕ್ಕಳು. 1 ನೇ ಅರೋಪಿ ಪತ್ನಿಯ ಹೆಸರು ಸಾವಂತ್ರಿಬಾಯಿ. ಈಗ ಆಕೆ ಜೀವಂತವಿಲ್ಲ. 1 ನೇ ಅರೋಪಿಯೇ ತನ್ನ ಪತ್ನಿಯನ್ನು ಸಾಯಿಸಿ ಜೈಲಿಗೆ ಹೋಗಿದ್ದ. ಮೃತನಿಗೆ ವಿವಾಹವಾಗಿತ್ತು. ಅತನ ಪತ್ನಿಯ ಹೆಸರು ಸಾವಿತ್ರಿಬಾಯಿ. ಮೃತನಿಗೆ ಎರಡು ಗಂಡು ಮಕ್ಕಳು. 1 ನೇ ಅರೋಪಿಗೆ ತಂದೆ ತಾಯಿ ಮೃತರಾಗಿರುತ್ತಾರೆ.

2. ರವಿಚಂದ್ರನಾಯ್ಕು 1 ವರ್ಷ 2-3 ತಿಂಗಳ ಹಿಂದೆ ಮೃತರಾಗಿರುತ್ತಾರೆ. ಚಾಸಾಃ 1 ಒಂದು ವರ್ಷ ಎರಡು ಮೂರು ತಿಂಗಳ ಹಿಂದೆ ನನ್ನ ಬಳಿ ಬಂದು ನಮ್ಮ ಜಮೀನು ವಿಭಾಗ ಮಾಡಿಕೊಂಡು ದಾಖಲಾತಿ ಮಾಡಿಕೊಳ್ಳಬೇಕು ನನ್ನ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳು ದಾಖಲಾತಿ ಮಾಡಿಕೊಳ್ಳಲು ಬರುತ್ತಿಲ್ಲ ಅವರ ಬಳಿ ಮಾತನಾಡಲು ಬರುವಂತೆ ನನ್ನನ್ನು ಕರೆದರು. ನಾನು ಚಾಸಾಃ 1 ರವರಿಗೆ ನಾನು ನಿಮ್ಮ ವಂಶಸ್ಥನಲ್ಲ ಬರುವುದಿಲ್ಲ ಎಂದು ಎರಡು ಬಾರಿ ವಾಪಸ್ಸು ಕಳುಹಿಸಿದೆ. ಆತ ಮತ್ತೂಮ್ಮೆ ನನ್ನ ಬಳಿ ಬಂದು ಬರುವಂತೆ ಕರೆದಿದ್ದ. ನಂತರ ನಾನೇ ಚಾಸಾಃ 1 ರವರಿಗೆ ನಿಮ್ಮ ಮನೆಯ ಬಳಿ ಬರುತ್ತೇನೆ ಎಂದು ಕಳುಹಿಸಿದೆ. ನಾನು ರಾಜಾನಾಯ್ಕು ಮತ್ತು ರವಿಚಂದ್ರನಾಯ್ಕು ವಾಸವಾಗಿದ್ದ ಮನೆಯ ಬಳಿ ಹೋಗಿದ್ದೆ. ಅವರ ಸಂಬಂದಿಕರೂ ಸಹ ಮನೆಯ ಬಳಿ ಸೇರಿದರು. ಜಮೀನು ಪಾಲುಪಾರಿಕತ್ತು ಮಾಡಿಕೊಳ್ಳಲು ಕರೆದಿರುವುದಾಗಿ ತಿಳಿಸಿದರು. 1 ನೇ ಅರೋಪಿ, 2 ನೇ ಅರೋಪಿ ಮತ್ತು ಅವರ ಸಂಬಂದಿಕರು ಮನೆಯಲ್ಲಿ ಇದ್ದರು. ರವಿಚಂದ್ರನಾಯ್ಕು ಮನೆಯಲ್ಲಿ ಇರಲಿಲ್ಲ.

3. ನಾನು 1 ನೇ ಅರೋಪಿಯನ್ನು ರವಿಚಂದ್ರನಾಯ್ಕುನ ಬಗ್ಗೆ ಕೇಳಿದೆ. ಯುಗಾದಿ ಹಬ್ಬದ ನಂತರ ಹೋದವನು ಅತ ಬಂದಿಲ್ಲ ಎಂದು ತಿಳಿಸಿದರು. ನಾನು 2 ನೇ ಅರೋಪಿಯನ್ನು ಅಕೆಯ ಗಂಡನ ಬಗ್ಗೆ ವಿಚಾರಿಸಿದೆ. ಆಕೆ ಏನೂ ಉತ್ತರ ಕೊಟ್ಟಿರಲಿಲ್ಲ. ನಂತರ ಅಕೆ ಫೊನ್ ಮಾಡಿದರೂ ತೆಗೆಯುತ್ತಿಲ್ಲ ಫೋನ್ ಸ್ವಿಚ್ ಅಪ್ ಅಗಿದೆ ಎಂದು ತಿಳಿಸಿದರು. ನಾನು 2 ನೇ ಅರೋಪಿಗೆ ಜಮಿನು ಪಾಲುಪಾರಿಕತ್ತು ಮಾಡಲು ನಿನ್ನ ಯಜಮಾನರು ಬರಬೇಕು ಆತ ಮೃತನಾಗಿದ್ದರೆ ಮರಣ ಪ್ರಮಾಣ ಪತ್ರ ಕೊಡಬೇಕು ಎಂದು

ಕೇಳಿದೆ. ನಾನು 2 ನೇ ಅರೋಪಿಗೆ ಯಾರ ಮೇಲಾದರೂ ಅನುಮಾನ ಇದ್ದರೆ ಹೇಳು ಎಂದು ಕೇಳಿದೆ. ಆಗ 2 ನೇ ಅರೋಪಿ ನನ್ನ ಬಾವ ರಾಜಾನಾಯ್ಕುನ ಮೇಲೆ ಅನುಮಾನ ಎಂದು ತಿಳಿಸಿದರು. ಇವತ್ತು ಬೆಳಗಿನಿಂದ ಅತನ ಮೇಲೆ ಅನುಮಾನ ಎಂದು ತಿಳಿಸಿದರು. ನಾನು ಯಾವ ಕಾರಣಕ್ಕೆ ಅತನ ಮೇಲೆ ಅನುಮಾನ ಎಂದು ಕೇಳಿದೆ. ಆಕೆ ನನ್ನ ಯಜಮಾನರು ನನಗೆ ಹೊಡೆಯಲು ಬರುತ್ತಿದ್ದರು. ನಾನು ಓಡಿಹೋಗುತ್ತಿದ್ದೆ ಆಗ 1 ನೇ ಅರೋಪಿ ನನ್ನ ಯಜಮಾನರಿಗೆ ಹಿಂದಿನಿಂದ ಕೈಗಳಲ್ಲಿ ಹೊಡೆದಿದ್ದರು ನನ್ನ ಯಜಮಾನರು ಕೆಳಕ್ಕೆ ಬಿದ್ದರು. ಆತ ಕೆಳಕ್ಕೆ ಬಿದ್ದಾಗ ಸತ್ತಿರಲಿಲ್ಲ ನನ್ನ ಗಂಡನನ್ನು ಎಳೆದುಕೊಂಡು ಹೋಗಿ ಮನೆಯ ಒಳಗೆ ಬಿಟ್ಟಿದ್ದೆ ಎಂದು 2 ನೇ ಆರೋಪಿ ಹೇಳಿದರು. ನಾನು ಎಳೆದುಕೊಂಡು ಹೋದಾಗ ನನ್ನ ಯಜಮಾನರು ಸತ್ತಿರಲಿಲ್ಲ ಎಂದು ತಿಳಿಸಿದರು. ಆಗ ನಿನ್ನ ಯಜಮಾನರು ಎಲ್ಲಿ ಹೋಗಿದ್ದಾರೆ ಎಂದು ಕೇಳಿದೆ. ಅಕೆ 1 ನೇ ಅರೋಪಿಯನು ಕೇಳುವಂತೆ ಹೇಳಿದರು. ನಾನು ಇಬ್ಬರಿಗೂ ರವಿಚಂದ್ರನಾಯ್ಕುನ ಬಗ್ಗೆ ಕೇಳಿದಾಗ 1 ನೇ ಅರೋಪಿ ನಾನೇ ರವಿಚಂದ್ರನಾಯ್ಕುನನ್ನು ಸಾಯಿಸಿದ್ದೇನೆ ಎಂದು ಹೇಳಿದರು. 1 ನೇ ಆರೋಪಿ ಟವಲ್ ನಲ್ಲಿ ಸುತ್ತಿ ಹಾಕಿ ತುಳಿದು ಸಾಯಿಸಿದ್ದೆ ಎಂದು ಹೇಳಿದ. ಸಾಯಿಸಿದ ನಂತರ ಶವವನ್ನು ರಾಜಾನಾಯ್ಕು ಬಳಕೆ ಮಾಡುತ್ತಿದ್ದ ಬೇಸ್ ಮೆಂಟ್ ನ ಬಳಿಗೆ ಶವ ತೆಗೆದುಕೊಂಡು ಹೋಗಿ ಹುಲ್ಲನ್ ರಗ್ಗಿನಲ್ಲಿ ಶವ ಸುತ್ತಿ ಶವ ಹೂತು ಹಾಕಿ ಮಣ್ಣು ಮುಚ್ಚಿದ್ದಾಗಿ 1 ನೇ ಅರೋಪಿಯೇ ನಮಗೆ ತಿಳಿಸಿದ. ಶವ ವಾಸನೆ ಬರುತ್ತದೆ ಎಂದು ಮಣ್ಣು ಮುಚ್ಚಿರುವುದಾಗಿ ತಿಳಿಸಿದರು. ಕೊಲೆ ಮಾಡಿದ ದಿನ ಯುಗಾದಿ ಹಬ್ಬ ಆಗಿತ್ತು.

4. ಚಾಸಃ 1 ಈ ಬಗ್ಗೆ ದೂರು ಕೊಟ್ಟಿದ್ದರು. ಪೊಲೀಸರು, ತಹಶೀಲ್ದಾರರು, ವೈದ್ಯರು, ಎಸಿ, ಎಸ್.ಪಿ ಮತ್ತು ಡಿವೈ.ಎಸ್.ಪಿ ರವರು ಸ್ಥಳಕ್ಕೆ ಬಂದಿದ್ದರು. ಜೆಸಿಬಿಯಲ್ಲಿ ಮಣ್ಣು ತೆಗೆದಾಗ ಬಟ್ಟೆ ಮತ್ತು ಮೂಳೆಗಳು ಸಿಕ್ಕಿದವು. ಬಟ್ಟೆಯಲ್ಲಿ ಸುತ್ತಿದ್ದ ಮೂಳೆಗಳನ್ನು ಪೊಲೀಸರು ಹೊರತೆಗೆದರು. ಪೊಲೀಸರು ನನ್ನನ್ನು ಈ ಪ್ರಕರಣದ ಘಟನೆಗೆ ಸಂಬಂದಿಸಿದಂತೆ ವಿಚಾರಣೆ ಮಾಡಿದ್ದಾರೆ. ನಾನು ಹೇಳಿಕೆ ಕೊಟ್ಟಿದ್ದೆ. 1 ಮತ್ತು 2 ನೇ ಅರೋಪಿಗಳ ನಡುವೆ ಸಂಬಂದ ಇರುತ್ತದೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದರು. ಜಮೀನು ಅಪಹರಿಸಲು ಕೊಲೆ ಮಾಡಿರುವುದಾಗಿ ತಿಳಿಯಿತು. ಕೊಲೆಯಾದ 2 ತಿಂಗಳು 2 ದಿನಗಳ ನಂತರ ನನಗೆ ಕೊಲೆಯಾದ ವಿಚಾರ ತಿಳಿದುಬಂತು.

5. 1 ಮತ್ತು 2 ನೇ ಅರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ವಿಸಿ ಮೂಲಕ ಹಾಜರುಪಡಿಸಿರುವ 1 ಮತ್ತು 2 ನೇ ಅರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಅರೋಪಿಗಳ ಪರಃ ಸಿಡಿಸಿ ರವರಿಂದ**

6. ನಾನು ನ್ಯಾಯಾಲಯದ ಮುಂದೆ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳನ್ನು ಪೊಲೀಸರ ಮುಂದೆ ಹೇಳಿದ್ದೆ. ಅದನ್ನು ಹೊರತುಪಡಿಸಿ ಬೇರೆ ವಿಚಾರಗಳನ್ನು ಹೇಳಿಲ್ಲ. ನಮ್ಮ ತಾಂಡ್ಯಾದಲ್ಲಿ ನಮ್ಮ ಜನಾಂಗದವರು ವಾಸವಾಗಿರುತ್ತಾರೆ. ಚಾಸಾಃ 1 ಮತ್ತು 1 ನೇ ಅರೋಪಿ ಮದ್ಯೆ ಜಮೀನು ವಿಬಾಗಕ್ಕೆ ಸಂಬಂದಿಸಿದಂತೆ ವ್ಯಾಜ್ಯ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. 25 ಎಕರೆ ಜಮೀನು ಇರುತ್ತದೆ ಎಂದು ನನಗೆ ಹೇಳಿದ್ದರಿಂದ ತಿಳಿದಿರುತ್ತದೆ. ಖುದ್ದಾಗಿ ಆ ಬಗ್ಗೆ ಗೊತ್ತಿಲ್ಲ. ನಮ್ಮ ಊರಿನಲ್ಲಿ ಗುಡಿಸಲು, ಹೆಂಚಿನ ಮನೆ, ಶೀಟಿನ ಮನೆ,

ಮಾಳಿಗೆ ಮನೆಗಳು ಹಾಗೂ ಇತರೆ ರೀತಿಯ ಮನೆಗಳು ಇರುತ್ತವೆ. ಕೆಲವು ಮನೆಗಳು ಒತ್ತಾಗಿ ಇರುತ್ತವೆ ಕೆಲವು ಮನೆಗಳು ದೂರ ದೂರ ಇರುತ್ತವೆ. ಸಾಮಾನ್ಯವಾಗಿ ಯುಗಾದಿ ಹಬ್ಬದ ಸಮಯದಲ್ಲಿ ತುಂಬಾ ಬಿಸಿಲು ಮತ್ತು ಸೆಕೆ ಇರುತ್ತದೆ ಎಂದರೆ ಸರಿ. ಬಿಸಿಲು ಕಾಲದಲ್ಲಿ ನಮ್ಮ ತಾಂಡ್ಯಾದಲ್ಲಿ ಕೆಲವು ಮನೆಗಳ ಸದಸ್ಯರು ಮನೆಯ ಹೊರಗೆ ಮಲಗುತ್ತಾರೆ ಕೆಲವರು ಮನೆಯ ಒಳಗೆ ಮಲಗುತ್ತಾರೆ. ನಮ್ಮ ತಾಂಡ್ಯಾದಲ್ಲಿ ಶೀಟು ಮತ್ತು ಗುಡಿಸಲು ವಾಸಿಗಳು ಬೇಸಿಗೆ ವೇಳೆ ಸೆಕೆ ಇರುವ ಕಾರಣ ಮನೆಯಿಂದ ಹೊರಗೆ ಮಲಗುವ ವಿಚಾರ ನನಗೆ ಗೊತ್ತಿಲ್ಲ.

7. ಚಾಸಾಃ 1 ಮತ್ತು ಅರೋಪಿಗಳ ಕುಟುಂಬದವರ ಮಧ್ಯೆ ಜಮೀನು ವಿಷಯಕ್ಕೆ ವೈಷಮ್ಯ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾಃ 1 ಒಂದು ವರ್ಷ ಎರಡು ಮೂರು ತಿಂಗಳ ಹಿಂದೆ ನನ್ನ ಬಳಿ ಬಂದು ನಮ್ಮ ಜಮೀನು ವಿಭಾಗ ಮಾಡಿಕೊಂಡು ದಾಖಲಾತಿ ಮಾಡಿಕೊಳ್ಳಬೇಕು ನನ್ನ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳು ದಾಖಲಾತಿ ಮಾಡಿಕೊಳ್ಳಲು ಬರುತ್ತಿಲ್ಲ ಅವರ ಬಳಿ ಮಾತನಾಡಲು ಬರುವಂತೆ ನನ್ನನ್ನು ಕರೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾಃ 1 ರವರಿಗೆ ನಾನು ನಿಮ್ಮ ವಂಶಸ್ಥನಲ್ಲ ಬರುವುದಿಲ್ಲ ಎಂದು ಎರಡು ಬಾರಿ ವಾಪಸ್ಸು ಕಳುಹಿಸಿದೆ ಎಂದರೆ ಸರಿಯಲ್ಲ. ಆತ ಮತ್ತೊಮ್ಮೆ ನನ್ನ ಬಳಿ ಬಂದು ಬರುವಂತೆ ಕರೆದಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನೇ ಚಾಸಾಃ 1 ರವರಿಗೆ ನಿಮ್ಮ ಮನೆಯ ಬಳಿ ಬರುತ್ತೇನೆ ಎಂದು ಕಳುಹಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಾಜಾನಾಯ್ಕ ಮತ್ತು ರವಿಚಂದ್ರನಾಯ್ಕ ವಾಸವಾಗಿದ್ದ ಮನೆಯ ಬಳಿ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಅವರ ಸಂಬಂಧಿಕರೂ ಸಹ ಮನೆಯ ಬಳಿ ಸೇರಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನು ಪಾಲುಪಾರಿಕತ್ತು ಮಾಡಿಕೊಳ್ಳಲು ಕರೆದಿರುವುದಾಗಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಅರೋಪಿ, 2 ನೇ ಅರೋಪಿ ಮತ್ತು ಅವರ ಸಂಬಂಧಿಕರು ಮನೆಯಲ್ಲಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ರವಿಚಂದ್ರನಾಯ್ಕ ಮನೆಯಲ್ಲಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಾನು 1 ನೇ ಅರೋಪಿಯನ್ನು ರವಿಚಂದ್ರನಾಯ್ಕನ ಬಗ್ಗೆ ಕೇಳಿದಾಗ ಯುಗಾದಿ ಹಬ್ಬದ ನಂತರ ಹೋದವನು ಅತ ಬಂದಿಲ್ಲ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಅರೋಪಿಯನ್ನು ಅಕೆಯ ಗಂಡನ ಬಗ್ಗೆ ವಿಚಾರಿಸಿದಾಗ ಆಕೆ ಏನೂ ಉತ್ತರ ಕೊಟ್ಟಿರಲಿಲ್ಲ ಮತ್ತು ನಂತರ ಅಕೆ ಫೋನ್ ಮಾಡಿದರೂ ತೆಗೆಯುತ್ತಿಲ್ಲ ಫೋನ್ ಸ್ವಿಚ್ ಅಪ್ ಅಗಿದೆ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಅರೋಪಿಗೆ ಜಮಿನು ಪಾಲುಪಾರಿಕತ್ತು ಮಾಡಲು ನಿನ್ನ ಯಜಮಾನರು ಬರಬೇಕು ಆತ ಮೃತನಾಗಿದ್ದರೆ ಮರಣ ಪ್ರಮಾಣ ಪತ್ರ ಕೊಡಬೇಕು ಎಂದು ತಿಳಿಸಿ ನಾನು 2 ನೇ ಅರೋಪಿಗೆ ಯಾರ ಮೇಲಾದರೂ ಅನುಮಾನ ಇದ್ದರೆ ಹೇಳು ಎಂದು ಕೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ 2 ನೇ ಅರೋಪಿ ನನ್ನ ಬಾವ ರಾಜಾನಾಯ್ಕನ ಮೇಲೆ ಅನುಮಾನ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತು ಬೆಳಗಿನಿಂದ ಅತನ ಮೇಲೆ ಅನುಮಾನ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವ ಕಾರಣಕ್ಕೆ ಅತನ ಮೇಲೆ ಅನುಮಾನ ಎಂದು ಕೇಳಿದಾಗ ಆಕೆ ನನ್ನ ಯಜಮಾನರು ನನಗೆ ಹೊಡೆಯಲು

ಬರುತ್ತಿದ್ದಾಗ  ನಾನು ಓಡಿಹೋಗುತ್ತಿದ್ದೆ ಆಗ 1 ನೇ ಅರೋಪಿ ನನ್ನ ಯಜಮಾನರಿಗೆ ಹಿಂದಿನಿಂದ ಕೈಗಳಲ್ಲಿ ಹೊಡೆದಿದ್ದರು ನನ್ನ ಯಜಮಾನರು ಕೆಳಕ್ಕೆ ಬಿದ್ದಾಗ ಸತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನನ್ನು ಎಳೆದುಕೊಂಡು ಹೋಗಿ ಮನೆಯ ಒಳಗೆ ಬಿಟ್ಟಿದ್ದೆ ಎಂದು 2 ನೇ ಆರೋಪಿ ಹೇಳಿದರು ಮತ್ತು ನಾನು ಎಳೆದುಕೊಂಡು ಹೋದಾಗ ನನ್ನ ಯಜಮಾನರು ಸತ್ತಿರಲಿಲ್ಲ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಿನ್ನ ಯಜಮಾನರು ಎಲ್ಲಿ ಹೋಗಿದ್ದಾರೆ ಎಂದು ಕೇಳಿದೆ. ಅಕೆ 1 ನೇ ಅರೋಪಿಯನು ಕೇಳುವಂತೆ ಹೇಳಿದರು. ನಾನು ಇಬ್ಬರಿಗೂ ರವಿಚಂದ್ರನಾಯ್ಕುನ ಬಗ್ಗೆ ಕೇಳಿದಾಗ 1 ನೇ ಅರೋಪಿ ನಾನೇ ರವಿಚಂದ್ರನಾಯ್ಕುನನ್ನು ಸಾಯಿಸಿದ್ದೇನೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಟವಲ್ ನಲ್ಲಿ ಸುತ್ತಿ ಹಾಕಿ ತುಳಿದು ಸಾಯಿಸಿದ್ದೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಯಿಸಿದ ನಂತರ ಶವವನ್ನು ರಾಜಾನಾಯ್ಕು ಬಳಕೆ ಮಾಡುತ್ತಿದ್ದ ಬೇಸ್ ಮೆಂಟ್ ನ ಬಳಿಗೆ ಶವ ತೆಗೆದುಕೊಂಡು ಹೋಗಿ ಹುಲ್ಲನ್ ರಗ್ಗಿನಲ್ಲಿ ಶವ ಸುತ್ತಿ ಶವ ಹೂತು ಹಾಕಿ ಮಣ್ಣು ಮುಚ್ಚಿದ್ದಾಗಿ 1 ನೇ ಅರೋಪಿಯೇ ನಮಗೆ ತಿಳಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶವ ವಾಸನೆ ಬರುತ್ತದೆ ಎಂದು ಮಣ್ಣು ಮುಚ್ಚಿರುವುದಾಗಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಲೆ ಮಾಡಿದ ದಿನ ಯುಗಾದಿ ಹಬ್ಬ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಅರೋಪಿಗಳಿಗೆ ನಾನು ರವಿಚಂದ್ರನಾಯ್ಕುನ ಬಗ್ಗೆ ಯಾವುದೇ ವಿಚಾರ ಕೇಳಿರಲಿಲ್ಲ ಅವರು ನನ್ನ ಬಳಿ ಯಾವುದೇ ವಿಚಾರ ಹೇಳಿರಲಿಲ್ಲ ಎಂದರೆ ಸರಿಯಲ್ಲ.

9. ಇಬ್ಬರೂ ಅರೋಪಿಗಳ ನಡುವೆ ಸಂಬಂದ ಇರುತ್ತದೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರವಿಚಂದ್ರನಾಯ್ಕನನ್ನು ಯಾರು ಯಾವ ವಿಚಾರಕ್ಕೆ ಕೊಲೆ ಮಾಡಿದರು ಎಂದು ನನಗೆ ಖುದ್ದಾಗಿ ಗೊತ್ತಿಲ್ಲ ಸಾಕ್ಷಿ ಮುಂದುವರಿದು ಸಾವಂತ್ರಿಬಾಯಿ ನನ್ನ ಬಾವನ ಮೇಲೆ ಅನುಮಾನ ಇರುತ್ತದೆ ಎಂದು ಹೇಳಿದಾಗ 1 ನೇ ಅರೋಪಿ ನಾನೇ ಕೊಲೆ ಮಾಡಿದ್ದಾಗಿ ಹೇಳಿದ್ದರಿಂದ ನನಗೆ ಅವರೇ ರವಿಚಂದ್ರನಾಯ್ಕನನ್ನು ಕೊಲೆ ಮಾಡಿರುತ್ತಾರೆ ಎಂದು ತಿಳಿಯಿತು ಎಂದು ಮುಂದುವರಿದು ನುಡಿಯುತ್ತಾರೆ. 1 ಮತ್ತು 2 ನೇ ಅರೋಪಿಗಳು ಈ ರೀತಿ ನನ್ನ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ.

10. ನಮ್ಮ ಎಷ್ಟು ರಾಜಕೀಯ ಪಕ್ಷಗಳು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಹಲವು ಪ್ರಕರಣಗಳು ದಾಖಲಾಗಿರುತ್ತದೆ ಅದರೆ ಎಷ್ಟು ಪ್ರಕರಣಗಳು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಚಾಸಾಃ 1 ರವರಿಗೆ ಸಹಾಯ ಮಾಡಲು ಅರೋಪಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಚಾಸಾಃ 1 ರವರಿಗೂ ನಾನು ಸಂಬಂದಿಕನಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.